# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

24 1994-2018 GROWTH DRIVEN BY PERFORMANCE

ಸಂಪುಟ : IV ಸಂಚಿಕೆ : 2 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜುಲೈ- ಸೆಪ್ಟೆಂಬರ್ 2018


## ಅಧ್ಯಕ್ಷರ ಮಾತು



**ಶ್ರೀ ಕೆ. ಜೈರಾಜ್ ಬಿ. ರೈ**
**ಅಧ್ಯಕ್ಷರು**

2017-18ನೇ ಸಾಲಿನ ಮಹಾಸಭೆಯು ದಿನಾಂಕ 16.09.2018ರಂದು ಜರಗಿತು. ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಹಾಜರಿದ್ದು, ಸಕ್ರಿಯವಾಗಿ ಭಾಗವಹಿಸಿ ಮಹಾಸಭೆಯನ್ನು ಯಶಸ್ವೀಗೊಳಿಸಿರುವುದಕ್ಕೆ ಎಲ್ಲಾ ಸದಸ್ಯ ಬಾಂಧವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

2017-18ನೇ ಸಾಲಿನ ಸಂಘದ ಸರ್ವತೋಮುಖ ಪ್ರಗತಿಯನ್ನು ಪರಿಗಣಿಸಿ ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನವರು ಸಂಘಕ್ಕೆ ದಿನಾಂಕ 01.09.2018ರಂದು ಸಾಧನಾ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಈ ಪ್ರಶಸ್ತಿಯು ಸಂಘಕ್ಕೆ 7ನೇ ಬಾರಿ ದೊರಕಿರುತ್ತದೆ.

ಸಂಘವು 30.09.2018ಕ್ಕೆ ಅಂತ್ಯವಾದ 2018-19ನೇ ಸಾಲಿನ ಅರ್ಧ ವಾರ್ಷಿಕ ಅವಧಿಯಲ್ಲಿ ಅತ್ಯುತ್ತಮ ಪ್ರಗತಿ ದಾಖಲಿಸಿರುವುದು. ರೂ.175 ಕೋಟಿ ಠೇವಣಿ, ರೂ.141 ಕೋಟಿ ಸಾಲದೊಂದಿಗೆ ಒಟ್ಟು ವ್ಯವಹಾರ ರೂ.316 ಕೋಟಿಯನ್ನು ಮೀರಿದೆ. 30.09.2017ಕ್ಕೆ ಹೋಲಿಸುವಾಗ ರೂ.52 ಕೋಟಿ ವ್ಯವಹಾರ ಅಭಿವೃದ್ಧಿಗೊಂಡಿರುವುದು (ಠೇವಣಾತಿಯಲ್ಲಿ ರೂ.29 ಕೋಟಿ ಹೊರಬಾಕಿ ಸಾಲ ರೂ.23 ಕೋಟಿ). ಪ್ರಸ್ತುತ ಸಾಲಿನ ಮೊದಲ ಅರ್ಧ ವಾರ್ಷಿಕದಲ್ಲಿ 1) ಸಿಬ್ಬಂದಿಗಳ ವೇತನ ಪರಿಷ್ಕರಣೆ, 2) 30 ಹೊಸ ಸಿಬ್ಬಂದಿಗಳ ನೇಮಕಾತಿ, 3) ಸ್ಥಿರಾಸ್ತಿ ಖರೀದಿಯಿಂದಾಗಿ, ಸುಮಾರು ರೂ.64 ಲಕ್ಷದಷ್ಟು ಹೆಚ್ಚಿನ ಹೊರೆಯಿದ್ದರೂ ಕೂಡ, ರೂ.1.82 ಕೋಟಿ ಲಾಭಗಳಿಸಿರುವುದು ಪ್ರಶಂಸನೀಯ. 2018-19ನೇ ಸಾಲಿನ ಈ ಅರ್ಧ ವಾರ್ಷಿಕ ಅವಧಿಗೆ ನಿರೀಕ್ಷಿಸಿದ ಪ್ರಗತಿಯನ್ನು ನಾವು ಸಾಧಿಸಿದ್ದೇವೆ ಎಂದು ತಿಳಿಸಲು ತುಂಬಾ ಸಂತೋಷವಾಗುತ್ತಿದೆ. ಇದಕ್ಕೆ ಕಾರಣಕರ್ತರಾದ ಆಡಳಿತ ಮಂಡಳಿಯ ಸರ್ವ ನಿರ್ದೇಶಕರು, ಶಾಖಾ ಸಲಹಾ ಸಮಿತಿ ಹಾಗೂ ಎಲ್ಲಾ ಸಿಬ್ಬಂದಿಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಈ ಅರ್ಧವಾರ್ಷಿಕ ಅವಧಿಯಲ್ಲಿ ನಿಗದಿತ ಎಲ್ಲಾ ಮುಖ್ಯ ಗುರಿಗಳನ್ನು ತಲುಪಿದ ಚಿಲಿಂಬಿ ಮತ್ತು ವೆಲೆನ್ಸಿಯಾ ಶಾಖೆಗಳಿಗೆ ಹಾಗೂ ಈ ಅವಧಿಯಲ್ಲಿ ಉತ್ತಮ ಪ್ರಗತಿಯನ್ನು ತೋರಿಸಿರುವ ಎಲ್ಲಾ ಶಾಖೆಗಳಿಗೆ ಅಭಿನಂದನೆಗಳು.

ನಿಗದಿತ ಗುರಿಗಳನ್ನು ಪ್ರತಿ ತಿಂಗಳು ಸಾಧಿಸಿ, ಮುಂಬರುವ ಅವಧಿಯಲ್ಲಿ ಇದಕ್ಕಿಂತ ಹೆಚ್ಚಿನ ಪ್ರಗತಿಯನ್ನು ದಾಖಲಿಸಿ, ಸಂಘವು ಗುರಿ ಮೀರಿದ ಸಾಧನೆಯನ್ನು ಮಾಡಲು ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳು ಸದಾ ಕಾರ್ಯತತ್ಪರಾಗಿರಿ ಎಂದು ಅಪೇಕ್ಷಿಸುತ್ತೇನೆ.

**ಕೆ. ಜೈರಾಜ್ ಬಿ. ರೈ, ಅಧ್ಯಕ್ಷರು**

## ಸಂಘದ 24ನೇ ವಾರ್ಷಿಕ ಮಹಾಸಭೆ 2017-18ನೇ ಸಾಲಿಗೆ ಶೇ.23 ಡಿವಿಡೆಂಡ್




ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯ 24ನೇ ವಾರ್ಷಿಕ ಮಹಾಸಭೆ ದಿನಾಂಕ 16.09.2018ರಂದು ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಉರ್ವ ಸೆಂಟನರಿ ಚರ್ಚ್ ಹಾಲ್‌ನಲ್ಲಿ ಜರಗಿತು.

ಸಂಘದ ಒಟ್ಟು ವ್ಯವಹಾರ ರೂ.300 ಕೋಟಿಯನ್ನು ಮೀರಿದೆ. ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯ ಪ್ರಮಾಣದಲ್ಲಿದ್ದು, 2017-18ನೇ ಸಾಲಿನ ಸಂಘದ ಅಮೂಲಾಗ್ರ ಪ್ರಗತಿಯನ್ನು ಪರಿಗಣಿಸಿ ಎಸ್.ಸಿ.ಡಿ.ಸಿ.ಸಿ ಬ್ಯಾಂಕ್ ಕೊಡಮಾಡುವ ಸಾಧನಾ ಪ್ರಶಸ್ತಿಯು ಸಂಘಕ್ಕೆ ಲಭಿಸಿದೆ, 2018-19 ಸಾಲಿನಲ್ಲಿ ಪುತ್ತೂರಿನ ಕಡಬ ಮತ್ತು ಮಂಗಳೂರಿನ ಹಂಪನಕಟ್ಟೆಯಲ್ಲಿ ಎರಡು ಹೊಸ ಶಾಖೆಗಳನ್ನು ಆರಂಭಿಸುವುದು. ಅಲ್ಲದೆ ಮತ್ತೆರಡು ಹೊಸ ಶಾಖೆಗಳನ್ನು ತೆರೆಯಲು ಕ್ರಮವಿಡಲಾಗುವುದು ಮತ್ತು ಐದು ಶಾಖೆಗಳನ್ನು ನವೀಕರಿಸಲು ಕಾರ್ಯಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ಸಭೆಗೆ ತಿಳಿಸಿದರು.

2017-18ನೇ ಸಾಲಿಗೆ ರೂ.4.71 ಕೋಟಿ ನಿವ್ವಳ ಲಾಭ ಗಳಿಸಿ ಸದಸ್ಯರ ಪಾಲು ಬಂಡವಾಳಕ್ಕೆ ಶೇ.23 ಡಿವಿಡೆಂಡನ್ನು ನೀಡುವುದೆಂದು ಮಹಾಸಭೆಯಲ್ಲಿ ನಿರ್ಧರಿಸಲಾಯಿತು.

ಸಂಘವು 2017-18ನೇ ಸಾಲಿನಲ್ಲಿ ಸಾರ್ವಕಾಲಿಕ ದಾಖಲೆಯ ಪ್ರಗತಿ ಸಾಧನೆಯನ್ನು ಸದಸ್ಯರು ಶ್ಲಾಘಿಸಿ ಸಂಘದ ಈ ಅಪ್ರತಿಮ ಸಾಧನೆಗೆ ಕಾರಣಕರ್ತರಾದ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗವನ್ನು ಅಭಿನಂದಿಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ ಹಾಗೂ ನಿರ್ದೇಶಕರುಗಳಾದ ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ, ಶ್ರೀ ಕೆ. ಸೀತಾರಾಮ ರೈ ಸವಣೂರು, ಡಾ। ಕೆ. ಸುಭಾಶ್ಚಂದ್ರ ಶೆಟ್ಟಿ, ಶ್ರೀ ಪಿ. ಶಿವರಾಮ ಅಡ್ಯಂತಾಯ, ಸಿಎ ಎಚ್.ಆರ್. ಶೆಟ್ಟಿ, ಶ್ರೀ ವಿಠಲ ಪಿ. ಶೆಟ್ಟಿ, ಶ್ರೀ ಯಂ. ರಾಮಯ ಶೆಟ್ಟಿ, ಶ್ರೀ ಎಂ. ಸೀತಾರಾಮ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ರವೀಂದ್ರನಾಥ ಜಿ. ಹೆಗ್ಡೆ, ಶ್ರೀ ಕೆ. ದಯಾಕರ್ ಆಳ್ವ, ಬೆಳ್ಳಿಪಾಡಿ ಶ್ರೀ ಪ್ರಸಾದ್ ಕೌಶಲ್ ಶೆಟ್ಟಿ, ಡಾ। ಎಂ. ಸುಧಾಕರ ಶೆಟ್ಟಿ ಯವರು ಉಪಸ್ಥಿತರಿದ್ದರು.

ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ಯವರು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆ, ಲಾಭ ನಿಂಗಡನೆ, ಬಜೆಟ್,

....ಪುಟ 2ರಲ್ಲಿ

1ನೇ ಪುಟದಿಂದ..

ಬೈಲಾ ತಿದ್ದುಪಡಿ ಪ್ರಸ್ತಾವನೆಗಳನ್ನು ಮಂಡಿಸಿದರು.

2017–18 ಸಾಲಿನಲ್ಲಿ ನಿಗದಿತ ಗುರಿಗಳನ್ನು ಸಾಧಿಸಿ ಅತ್ಯುತ್ತಮ ಕಾರ್ಯನಿರ್ವಹಣೆ ತೋರಿದ ಶಾಖೆಗಳನ್ನು ಹಾಗೂ 2017–18 ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಸಿಬ್ಬಂದಿಗಳ ಮಕ್ಕಳನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ನಿರ್ದೇಶಕರಾದ ಶ್ರೀ ಕೆ. ಸೀತಾರಾಮ ರೈ ಸವಣೂರು ಸ್ವಾಗತಿಸಿ, ಶ್ರೀ ಎಂ. ರಾಮಯ ಶೆಟ್ಟಿಯವರು ವಂದಿಸಿದರು. ಸಿಬ್ಬಂದಿಗಳಾದ ಶ್ರೀ ಮೋಹನ್‌ದಾಸ್ ಶೆಟ್ಟಿ ಮತ್ತು ಶ್ರೀ ಚಂದ್ರಹಾಸ್ ಶೆಟ್ಟಿಯವರು ಕಾರ್ಯಕ್ರಮ ನಿರೂಪಿಸಿದರು.

ಅಭಿನಂದನೆಗಳು

## ಹುಟ್ಟು ಹಬ್ಬದ ಶುಭಾಶಯಗಳು

### ಸಿಬ್ಬಂದಿಗಳ ಹೆಸರು ಮತ್ತು ಶಾಖೆ

| | |
|---|---|
| ಶ್ರೀಮತಿ ಯಶೋಧ ನ್ಯಾಕ್ ಉಡುಪಿ | ಶ್ರೀಮತಿ ಸೌಮ್ಯರಾಣಿ, ವೆಲೆನ್ಸಿಯಾ |
| ಶ್ರೀ ಅಣ್ಣಪ್ಪ ಶೆಟ್ಟಿ ಉಡುಪಿ | ಶ್ರೀ ಧನಂಜಯ ಕುಮಾರ್, ಚಿಲಿಂಬಿ |
| ಶ್ರೀಮತಿ ಸವಿತಾ ಪೂಂಜಾ, ಚಿಲಿಂಬಿ | ಶ್ರೀ ಶಮಂತ್ ಟಿ. ರೈ, ಕೇಂದ್ರ ಕಛೇರಿ |
| ಶ್ರೀ ಸಂತೋಷ್, ಕುಂದಾಪುರ | ಕು. ಸುಶ್ಮಿತ, ಉಡುಪಿ |
| ಶ್ರೀಮತಿ ನಂದಿತಾ ಆಚಾರ್ಯ, ವೆಲೆನ್ಸಿಯಾ | ಕು. ಪ್ರಜ್ಞಾ ಸಿ. ಶೆಟ್ಟಿ, ಕಾರ್ಕಳ |
| ಕು. ಪೂರ್ಣಿಮ, ಹೆಬ್ರಿ | ಕು. ಕೌಸ್ತುಭ ಶೆಟ್ಟಿ, ಮುಲ್ಕಿ |
| ಶ್ರೀ ರಕ್ಷಿತ್ ಆರ್. ಶೆಟ್ಟಿ, ತೊಕ್ಕೊಟ್ಟು | |

## ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನಿಂದ ಸಂಘಕ್ಕೆ ಸಾಧನಾ ಪ್ರಶಸ್ತಿ



ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಂಗಳೂರು ಇವರು ದಿನಾಂಕ 01.09.2018ರಂದು ಜರಗಿದ ಬ್ಯಾಂಕಿನ ಮಹಾಸಭೆಯಲ್ಲಿ ನಮ್ಮ ಸಂಘವು ಸಾಧಿಸಿದ ಸರ್ವತೋಮುಖ ಪ್ರಗತಿಯನ್ನು ಪರಿಗಣಿಸಿ ಸಂಘಕ್ಕೆ 'ಸಾಧನಾ ಪ್ರಶಸ್ತಿ–2017–18'ನ್ನು ನೀಡಿ ಗೌರವಿಸಿತು. ಎಸ್.ಸಿ.ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷರಾದ ಡಾ। ಎಂ.ಎನ್. ರಾಜೇಂದ್ರ ಕುಮಾರ್‌ರವರು, ಪ್ರಶಸ್ತಿ ಪ್ರದಾನ ಮಾಡಿದರು. ಸಂಘಕ್ಕೆ ಎಸ್.ಸಿ.ಡಿ.ಸಿ. ಬ್ಯಾಂಕಿನ ಈ ಪ್ರಶಸ್ತಿ 7ನೇ ಬಾರಿಗೆ ದೊರಕಿರುತ್ತದೆ.

## ಹೊಸ ಶಾಖೆಗಳ ಉದ್ಘಾಟನೆ



ದಿನಾಂಕ 24.09.2018 ರಂದು ಸೈಂಟ್ ಜೋಕಿಮ್ಸ್ ಚರ್ಚ್ ಕಡಬ ಇದರ ಧರ್ಮಗುರುಗಳಾದ ಫಾದರ್ ರೊನಾಲ್ಡ್ ಲೋಬೋರವರಿಂದ ಕಡಬದಲ್ಲಿ ಸಂಘದ 19ನೇ ಶಾಖೆಯ ಉದ್ಘಾಟನೆ.





ದಿನಾಂಕ 24.09.2018 ರಂದು ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈ ಯವರು ಸಂಘದ 20ನೇ ಶಾಖೆಯನ್ನು ಹಂಪನಕಟ್ಟೆ ಮಂಗಳೂರಲ್ಲಿ ಉದ್ಘಾಟಿಸಿದರು.

### ಪ್ರಸ್ತುತ ಶಾಖೆಗಳ ಸಂಖ್ಯೆ 20

## 2018–19ನೇ ಸಾಲಿನ ಅರ್ಧವಾರ್ಷಿಕ ಅವಧಿ ದಿನಾಂಕ 30.09.2018ಕ್ಕೆ ಇದ್ದಂತೆ ಪ್ರಗತಿಯ ಪಕ್ಷಿನೋಟ

(ರೂ. ಲಕ್ಷಗಳಲ್ಲಿ)

| ಕ್ರಸಂ. | ಕಾರ್ಯ ವಿಭಾಗ | ಸಪ್ಟೆಂಬರ್ 2017ಕ್ಕೆ ಇದ್ದಂತೆ | ಸಪ್ಟೆಂಬರ್ 2018ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇ. |
|---|---|---|---|---|---|
| 1 | ಠೇವಣಾತಿಗಳು | ರೂ.145 ಕೋಟಿ | ರೂ.175 ಕೋಟಿ | ರೂ.30 ಕೋಟಿ | 21% |
| 2 | ಸಾಲ ಮತ್ತು ಮುಂಗಡ | ರೂ.119 ಕೋಟಿ | ರೂ.141 ಕೋಟಿ | ರೂ.22 ಕೋಟಿ | 18% |
| 3 | ಒಟ್ಟು ವ್ಯವಹಾರ | ರೂ.264 ಕೋಟಿ | ರೂ.316 ಕೋಟಿ | ರೂ.52 ಕೋಟಿ | 20% |
| 4 | ನಿವ್ವಳ ಲಾಭ | ರೂ.1.45 ಕೋಟಿ | ರೂ.1.82 ಕೋಟಿ | ರೂ.37 ಲಕ್ಷ | 26% |
| 5 | ಅನುತ್ಪಾದಕ ಆಸ್ತಿ | ರೂ.53.45 ಲಕ್ಷ | ರೂ.41.75 ಲಕ್ಷ | ರೂ.11.73 ಲಕ್ಷ (ಕಡಿಮೆ) | |
| 6 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

## ಸಿಬ್ಬಂದಿ ವರ್ಗಾವಣೆ

| ಸಿಬ್ಬಂದಿ ಹೆಸರು | ಶಾಖೆ |
|---|---|
| ಶ್ರೀಮತಿ ಸವಿತಾ ಎಸ್., ಶಾಖಾ ವ್ಯವಸ್ಥಾಪಕ | ಚಿಲಿಂಬಿ |
| ಶ್ರೀ ಬಾಲಕೃಷ್ಣ ರೈ, ಶಾಖಾ ವ್ಯವಸ್ಥಾಪಕ | ವಿಟ್ಲ |
| ಶ್ರೀ ದಿನೇಶ್ ಶೆಟ್ಟಿ, ಶಾಖಾ ವ್ಯವಸ್ಥಾಪಕ | ಕಡಬ |
| ಶ್ರೀ ತಿಮ್ಮಯ್ಯ ಶೆಟ್ಟಿ, ಶಾಖಾ ವ್ಯವಸ್ಥಾಪಕ | ಹಂಪನಕಟ್ಟೆ |
| ಶ್ರೀ ಪ್ರವೀಣ್‌ರೈ, ಅಕೌಂಟೆಂಟ್ | ಕಡಬ |
| ಶ್ರೀ ರೋಹಿತ್ ಎಂ.ಜೆ., ಅಕೌಂಟೆಂಟ್ | ಉಪ್ಪಿನಂಗಡಿ |
| ಅಕ್ಷತ ಕುಮಾರಿ, ಪ್ರೊ. ಅಕೌಂಟೆಂಟ್ | ಹಂಪನಕಟ್ಟೆ |

## ಗೃಹ ಪ್ರವೇಶ

- ಸಂಘದ ವೆಲೆನ್ಸಿಯಾ ಶಾಖೆಯ ಶಾಖಾಧಿಕಾರಿ ಶ್ರೀ ಚಂದ್ರಹಾಸ ಶೆಟ್ಟಿರವರ ನೂತನ ಮನೆ "ಸತ್ಯದೇವತಾ ಕೃಪ" ಇದರ ಗೃಹ ಪ್ರವೇಶ ಕಾರ್ಯಕ್ರಮ ದಿನಾಂಕ 10.05.2018ರಂದು ಜರಗಿತು. ಇವರಿಗೆ ಹಾರ್ದಿಕ ಅಭಿನಂದನೆಗಳು.
- ಸಂಘದ ಸುರತ್ಕಲ್ ಶಾಖೆಯ ಅಟೆಂಡರ್ ಶ್ರೀ ಸೂರಜ್ ಭಂಡಾರಿರವರ ಅಭಿಶ್ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ. G7 ಇದರ ಗೃಹ ಪ್ರವೇಶ ಕಾರ್ಯಕ್ರಮ ದಿನಾಂಕ 02.07.2018ರಂದು ಜರಗಿತು. ಇವರಿಗೆ ಹಾರ್ದಿಕ ಅಭಿನಂದನೆಗಳು.
- ಸಂಘದ ಕೇಂದ್ರ ಕಛೇರಿಯ ಸ್ಟೆನೋ ಶ್ರೀಮತಿ ಶ್ವೇತಾರವರ ತ್ರಿಶಾ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ.402 "ಶಿವಂ" ಇದರ ಗೃಹ ಪ್ರವೇಶ ಕಾರ್ಯಕ್ರಮ ದಿನಾಂಕ 24.08.2018ರಂದು ಜರಗಿತು. ಇವರೆಲ್ಲರಿಗೂ ಹಾರ್ದಿಕ ಅಭಿನಂದನೆಗಳು.

## ಶ್ರದ್ಧಾಂಜಲಿ



ಸಂಘದ ಮಾಜಿ ನಿರ್ದೇಶಕರಾದ ಶ್ರೀ ಎಚ್. ಉಮೇಶ್ ಶೆಟ್ಟಿಯವರು ದಿನಾಂಕ 30.09.2018ರಂದು ದೈವಾಧೀನರಾದರು. ಇವರು 1997ರಿಂದ 2000ದ ಅವಧಿಯಲ್ಲಿ ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸಿರುವರು. ನಿವೃತ್ತ ನ್ಯಾಯಾಧೀಶರಾದ ಇವರು ನಿರ್ದೇಶಕರಾಗಿ ಸಂಘದ ಅಭ್ಯುದಯಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದವರು. ದಿವಂಗತ ಎಚ್. ಉಮೇಶ್ ಶೆಟ್ಟಿಯವರ ಸೇವೆಯನ್ನು ಸ್ಮರಿಸುತ್ತಾ ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿ ಕೋರಿ, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ ಯನ್ನು ಸಲ್ಲಿಸುತ್ತಿದ್ದೇವೆ.

## ಬೀಳ್ಕೊಡುಗೆ

ಸಂಘದ ಮುಲ್ಕಿ ಶಾಖೆಯಲ್ಲಿ ಅಕೌಂಟೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಪ್ರಶಾಂತ್ ಪಿ.ಎ.ಯವರು ವೈಯಕ್ತಿಕ ಕಾರಣದಿಂದ ಸಂಘದ ಸೇವೆಗೆ ರಾಜೀನಾಮೆ ನೀಡಿದ್ದು ಅವರು ದಿನಾಂಕ 05.10.2018ರಂದು ಸಂಘದ ಸೇವೆಯಿಂದ ಬಿಡುಗಡೆಗೊಂಡರು. ಶ್ರೀ ಪ್ರಶಾಂತ್ ಪಿ.ಎ.ಯವರನ್ನು ಹೃತ್ಪೂರ್ವಕವಾಗಿ ಬೀಳ್ಕೊಡುತ್ತಾ ಇವರ ಮುಂದಿನ ಜೀವನ ಯಶಸ್ಸಿಂದ ಕೂಡಿರಲಿ ಎಂದು ಹಾರೈಸುತ್ತೇವೆ. ಅವರಿಗೆ ಶುಭಹಾರೈಕೆಗಳು ತಿಳಿಸುತ್ತಿದ್ದೇವೆ.

## 2018–19ನೇ ಸಾಲಿನ ಪ್ರಶಸ್ತಿ ವಿಜೇತ ಶಾಖೆಗಳು

### A) ಸಮಗ್ರ ವ್ಯವಹಾರ ರೂ.13 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ವ್ಯವಹಾರದ ಶಾಖೆಗಳು



ಪ್ರಥಮ: ಮುಲ್ಕಿ



ದ್ವಿತೀಯ : ವೆಲೆನ್ಸಿಯಾ

### B) ಸಮಗ್ರ ವ್ಯವಹಾರ ರೂ.13 ಕೋಟಿಗಿಂತ ಕಡಿಮೆ ವ್ಯವಹಾರವುಳ್ಳ ಶಾಖೆಗಳು



ಪ್ರಥಮ: ಬೈಂದೂರು –



ದ್ವಿತೀಯ : ಬಿ.ಸಿ.ರೋಡ್

## ಠೇವಣಿ ಸಂಗ್ರಹಣೆ



ವಿಶೇಷ ಪ್ರಶಸ್ತಿ : ಮಂಗಳೂರು



ಪ್ರಥಮ: ಚಿಲಿಂಬಿ



ದ್ವಿತೀಯ : ಕಾರ್ಕಳ

## ಸಾಲ ವಿತರಣೆ



ಪ್ರಥಮ: ಸುರತ್ಕಲ್



ದ್ವಿತೀಯ : ಸುಳ್ಯ

## ಸ್ವಚ್ಛತಾ ನಿರ್ವಹಣೆ



ಹೆಬ್ರಿ

**2018ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಸಾಧನೆ ಗೈದವರಿಗೆ ದಿನಾಂಕ 16.09.2018ರಂದು ಜರಗಿದ ಸಂಘದ ಮಹಾಸಭೆಯಲ್ಲಿ ಸನ್ಮಾನಿಸಲಾಯಿತು**



ಕು. ಮಾನಸ ರಾವ್ (97.44%) D/o ಶ್ರೀ ರಾಘವೇಂದ್ರ ರಾವ್, .ಸಿಬ್ಬಂದಿ ಹೆಬ್ರಿ ಶಾಖೆ



ಮಾಸ್ಟರ್ ವಿಖ್ಯಾತ್ (94.88%) S/o ಶ್ರೀ ಶ್ರೀಹರ್ಷ ಡಿ.ಎಸ್., ಶಾಖಾಧಿಕಾರಿ ಉಪ್ಪಿನಂಗಡಿ ಶಾಖೆ



ಮಾಸ್ಟರ್ ಪ್ರತೀಕ್ ಶೆಟ್ಟಿ (88.32%) S/o ಶ್ರೀ ಕರುಣಾಕರ ಶೆಟ್ಟಿ, ಶಾಖಾಧಿಕಾರಿ ಪುತ್ತೂರು ಶಾಖೆ



ಮಾಸ್ಟರ್ ಜೋಸಿತ್ ಪಿ. ಶೆಟ್ಟಿ (81.12%) S/o ಶ್ರೀಮತಿ ನಿರ್ಮಲಾ ಶೆಟ್ಟಿ, ಶಾಖಾಧಿಕಾರಿ ಮೂಡಬಿದ್ರಿ ಶಾಖೆ



ಕು. ಹಿತ್ತೈಷಿ ಬಿ. ರೈ (79.2%) D/o ಶ್ರೀ ಬಾಲಕೃಷ್ಣ ರೈ, ಶಾಖಾಧಿಕಾರಿ ವಿಟ್ಲ ಶಾಖೆ



ಮಾಸ್ಟರ್ ಅಭಿಲಾಶ್ ಎಸ್. (76.32%) S/o ಶ್ರೀ ಸೇಸಪ್ಪ ನ್ಯಾಕ್, .ಸಿಬ್ಬಂದಿ ಪುತ್ತೂರು ಶಾಖೆ

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.